Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH


Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President


Volume 39 | Issue - 11 | 12th September 2024

# CLUB ASSEMBLY


**Time : 7.00 p.m.**
**Venue : Hotel Shivaprasad Grand, Kundapura**



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

**39th year of Service and Fellowship**

## ವಾರದ ಸಭೆಯ ವರದಿ







ಕಳೆದ ವಾರದ ಸಾಪ್ತಾಹಿಕ ಸಭೆಯು ತಾ. 6 ರಂದು ಗುರುವಾರ ಶಿವಪ್ರಸಾದ್ ಹೋಟೆಲಿನ ಸಭಾಂಗಣದಲ್ಲಿ ನಡೆಸಲಾಯಿತು. "ಪ್ರಸ್ತುತ ಕಾಲಘಟ್ಟದಲ್ಲಿ ತಾಂತ್ರಿಕ ಶಿಕ್ಷಣ ಅಗತ್ಯವೇ?" ಎನ್ನುವ ವಿಚಾರದಲ್ಲಿ ತಮ್ಮ ಅನಿಸಿಕೆಯನ್ನು ತಿಳಿಸಲು ಪಡುಕೋಣೆ ಐಟಿಐ ಶಾಲೆಯ ಮುಖ್ಯ ಬೋಧಕರಾದ ಶ್ರೀ ಯೋಗೀಶ್ ಬಂಕೇಶ್ವರ್‌ರವರು ಆಗಮಿಸಿದ್ದರು. ಮುಖ್ಯ ಅತಿಥಿಗಳನ್ನು ಹಾಗೂ ಆಗಮಿಸಿದ ಎಲ್ಲಾ ಸದಸ್ಯರನ್ನು ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ಆತ್ಮೀಯವಾಗಿ ಸ್ವಾಗತಿಸಿದರು. ರೊ. ಶ್ರೀನಿವಾಸ ಶೇಟ್‌ರವರ ಪ್ರಾರ್ಥನೆಯ ಮುಖಾಂತರ ಸಭೆಯನ್ನು ಪ್ರಾರಂಭಿಸಲಾಯಿತು. ಕಳೆದ ವಾರದ ವರದಿಯನ್ನು ಕಾರ್ಯದರ್ಶಿ ರೊ. ಭರತ್ ಶೆಟ್ಟಿಯವರ ಅನುಪಸ್ಥಿತಿಯಲ್ಲಿ ರೊ. ಸುರೇಖಾ ಪುರಾಣಿಕ್‌ರವರು ಸಭೆಗೆ ತಿಳಿಸಿದರು. ವಾರದ ಚಿಂತನೆಯಲ್ಲಿ ರೊ. ಮನೋಹರ ಭಟ್ಟರು ಬದುಕಿನ ಗುರಿಯೆಡೆಗೆ ಸಾಗಲು ಶ್ರಮಿಸಿದ ಗುರುಗಳಿಗೆ (ಶಿಕ್ಷಕರಿಗೆ) ಕೋಟಿ ನಮನ ಸಲ್ಲಿಸಿದರು. ರೋಟರಿ ಮಾಹಿತಿ ನೀಡಿದ ರೊ. ಕೆ. ಕೆ. ಕಾಂಚನ್‌ರವರು ರೋಟರಿ ರೂಪಿಸಿದ '7 ಕೇಂದ್ರೀಕೃತ ವಿಚಾರಗಳ' (**7 Areas of Focus**) ಬಗ್ಗೆ ವಿವರವನ್ನು ನೀಡುತ್ತಾ ರೋಟರಿಯು ಈ 7 ವಿಚಾರಗಳ ಮೂಲಕ ಸೇವೆಯನ್ನು ಸಲ್ಲಿಸಿದಲ್ಲಿ ಅದು ಸಮಾಜದ ಎಲ್ಲಾ ಸ್ತರಗಳನ್ನೂ ತಲುಪಲಿದೆ ಎಂದು ತಿಳಿಸಿದರು. ಅತಿಥಿಗಳ ಪರಿಚಯವನ್ನು ಸಭೆಗೆ ನೀಡಿದ ರೊ. ರಮಾನಂದ ಕಾರಂತರು ಶ್ರೀ ಯೋಗೀಶ್ ಬಂಕೇಶ್ವರ್‌ರವರು ಅಧ್ಯಾಪಕರಾಗಿ ವಿದ್ಯಾರ್ಥಿಗಳಿಗೆ ಮಾತ್ರ ಚಿರಪರಿಚಿತರಾಗಿರುವುದಲ್ಲದೇ ಕನ್ನಡ ಚಿತ್ರರಂಗದ ಒಬ್ಬ ಕಲಾವಿದರಾಗಿ 'ಕಾಂತಾರ' ಚಿತ್ರವಲ್ಲದೇ ಇತರ ಹಲವಾರು ಚಲನಚಿತ್ರಗಳಲ್ಲಿ ನಟಿಸಿರುವುದರಿಂದ ಕರ್ನಾಟಕದ ಜನತೆಗೆ ಅವರು ಪರಿಚಿತರು. ಮುಂದಿನ ದಿನಗಳಲ್ಲಿ ಅವರು ಕನ್ನಡ ಚಿತ್ರರಂಗದಲ್ಲಿ ಕುಂದಾಪುರದ ಇತರ ತಾರೆಯರಂತೆ ಕಂಗೊಳಿಸಿ ಕುಂದಾಪುರದ ಕೀರ್ತಿಯನ್ನು ಹೆಚ್ಚಿಸಲಿ ಎಂದು ಶುಭ ಹಾರೈಸಿದರು.

ನಂತರ "ಪ್ರಸ್ತುತ ಕಾಲಘಟ್ಟದಲ್ಲಿ ತಾಂತ್ರಿಕ ಶಿಕ್ಷಣ ಅಗತ್ಯವೇ?" ಎನ್ನುವ ವಿಚಾರದ ಬಗ್ಗೆ ಮಾತನಾಡಿದ ಅತಿಥಿ ಶ್ರೀ ಯೋಗೀಶ್ ಬಂಕೇಶ್ವರ್‌ರವರು "ತಾಂತ್ರಿಕ ಶಿಕ್ಷಣ ಮಾತ್ರವಲ್ಲ ಎಲ್ಲಾ ರೀತಿಯ ವೃತ್ತಿಪರ ಶಿಕ್ಷಣಗಳೂ ನಮಗೆ ಅಗತ್ಯ" ವೆಂದು ಅಭಿಪ್ರಾಯ ಪಟ್ಟರು. "ಇಂದು ಯಾವುದೇ ವೃತ್ತಿಪರ ಶಿಕ್ಷಣಗಳು ಪ್ರಾಥಮಿಕ ಅಥವಾ ಪ್ರೌಢಶಿಕ್ಷಣದಲ್ಲಿ ಲಭ್ಯವಿಲ್ಲದೇ, ಓಬೀರಾಯನ ಕಾಲದ ಶಿಕ್ಷಣ ಪದ್ಧತಿಯಲ್ಲೇ ಮುಂದುವರಿಯುತ್ತಿರುವುದರಿಂದ ಪದವಿ ಪೂರ್ವ ಶಿಕ್ಷಣ ಮುಗಿಯುವಾಗ ವಿದ್ಯಾರ್ಥಿಗಳು ಗೊಂದಲಕ್ಕೆ ಬಿದ್ದು ಬರೇ ತಾಂತ್ರಿಕ ಅಥವಾ ವೈದ್ಯಕೀಯ ಶಿಕ್ಷಣಕ್ಕೆ ಮೊರೆ ಹೋಗುತ್ತಾರೆ. ಇಂದು ಸರಕಾರವೇ ಗುರುತಿಸಿರುವ 136 ವೃತ್ತಿಪರ ಶಿಕ್ಷಣಗಳನ್ನು ಜಪಾನ್ ದೇಶದಲ್ಲಿ ಮಾಡಿದಂತೆ ಪ್ರಾಥಮಿಕ ಶಾಲೆಗಳಿಂದಲೇ ವೃತ್ತಿ ಶಿಕ್ಷಣದ ಪ್ರಾಥಮಿಕ ಹಂತಗಳ ತರಬೇತಿಯನ್ನು ಪ್ರಾಕ್ಟಿಕಲ್ ಆಗಿ ತಿಳಿಹೇಳಿದ್ದಲ್ಲಿ, ಪದವಿಪೂರ್ವ ಶಿಕ್ಷಣದ ಮೊದಲು ಪ್ರತೀ ವಿದ್ಯಾರ್ಥಿಯು ತನ್ನ ಆಸಕ್ತಿಯ ವಿಚಾರವನ್ನು ಹೆತ್ತವರೊಂದಿಗೆ ಚರ್ಚಿಸಿ ಭವಿಷ್ಯದ ಗುರಿಯನ್ನು ಹೊಂದಲು ಸಾಧ್ಯವಾಗುತ್ತದೆ. ಶಿಕ್ಷಕರ ದಿನವಾದ ಇಂದು ಇಲ್ಲಿ ನೆರೆದಿರುವ ಶಿಕ್ಷಕರು ಮತ್ತು ಪ್ರಗತಿಯನ್ನು ಆಶಿಸುವ ಹಿರಿಯರು ಈ ದಿಸೆಯಲ್ಲಿ ಚರ್ಚಿಸಿ, ಸರಕಾರದ ಮೇಲೆ ಒತ್ತಡಗಳನ್ನು ತಂದು ಈ ವಿಚಾರಗಳನ್ನು ಅನುಷ್ಠಾನಗೊಳಿಸಿದ್ದಲ್ಲಿ ಮುಂದೆ ಭಾರತೀಯರು ಉತ್ತಮ ಕೆಲಸಗಳನ್ನು ಅರಸಿ ವಿದೇಶಗಳಿಗೆ ಹೋಗುವ ಪ್ರಮೇಯ ಕಡಿಮೆಯಾಗಿ ನಮ್ಮ ಪ್ರತಿಭೆಗಳು ನಮ್ಮಲ್ಲೇ ಉಳಿಯುವುದರಿಂದ ನಮ್ಮ ದೇಶವೇ ಅಭಿವೃದ್ಧಿಗೊಳ್ಳಲು ಸಾಧ್ಯ" ವೆಂದು ಅಭಿಪ್ರಾಯಪಟ್ಟರು. ಶಿಕ್ಷಕರ ದಿನಾಚರಣೆಯ ಅಂಗವಾಗಿ ಸುಜ್ಞಾನ ಎಜ್ಯುಕೇಶನ್ ಟ್ರಸ್ಟ್‌ನ Chairman ಹಾಗೂ ನಮ್ಮ ಸದಸ್ಯರಾಗಿರುವ ರೊ. ರಮೇಶ್ ಶೆಟ್ಟಿಯವರನ್ನು ಹಾಗೂ ಸುಮಾರು 45 ವರ್ಷಗಳಿಂದ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ನೆಚ್ಚಿನ ಗಣಿತ ಶಿಕ್ಷಕಿಯಾಗಿರುವ ರೊ. ನಂದಾ ನಾಯಕ್ ಮತ್ತು ಪಡುಕೋಣೆಯ ಐಟಿಐ ಶಿಕ್ಷಕರಾಗಿರುವ ಶ್ರೀ ಯೋಗೀಶ್



ಬಂಕೇಶ್ವರ್‌ರವರನ್ನು ನಮ್ಮ ಕ್ಲಬ್ಬಿನ ವತಿಯಿಂದ ಅಭಿನಂದಿಸಿ ಸನ್ಮಾನಿಸಲಾಯಿತು.

ಉತ್ತಮ ಮಾಹಿತಿಯನ್ನು ನೀಡಿದ ಅತಿಥಿ ಶ್ರೀ ಯೋಗೀಶ್ ಬಂಕೇಶ್ವರರಿಗೆ ಧನ್ಯವಾದಗಳನ್ನು ತಿಳಿಸಿದ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ತಾ. 14ರಂದು ಆಯೋಜಿಸಲಾಗಿರುವ ಕ್ಯಾನ್ಸರ್ ತಪಾಸಣಾ ಶಿಬಿರಕ್ಕೆ ಸದಸ್ಯರೆಲ್ಲರ ಸಹಕಾರವನ್ನು ಕೋರಿ ಕಳೆದ ವಾರ ಇನ್ನರ್‌ವೀಲ್ ಕ್ಲಬ್‌ನವರೊಂದಿಗೆ ಸಾಕು ನಾಯಿಗಳ ಸಂತಾನಹರಣ ಶಿಬಿರವು ಯಶಸ್ವಿಯಾಗಲು ಕಾರಣಕರ್ತರಾದ ರೊ. ಸುರೇಖ ಪುರಾಣಿಕ್ ಮತ್ತು ರೊ. ಸತ್ಯನಾರಾಯಣ ಪುರಾಣಿಕ್‌ರವರಿಗೂ ಧನ್ಯವಾದಗಳನ್ನು ನೀಡಿದರು. ಲಕ್ಕಿ ರೊಟೇರಿಯನ್ ಆಗಿ ರೊ. ನಂದಾ ನಾಯಕ್‌ರವರು ಆಯ್ಕೆಯಾದರು. ಹೊಸ ಸದಸ್ಯರಾದ ರೊ. ಅನಿಲ್ ಡಿ'ಸಿಲ್ವಾರವರು ಎಲ್ಲರಿಗೂ ಧನ್ಯವಾದಗಳನ್ನು ನೀಡಿದರು. ರಾಷ್ಟ್ರಗೀತೆಯ ನಂತರ ಸಭೆಯನ್ನು ಮುಂದಿನ ವಾರಕ್ಕೆ ವಿಸ್ತರಿಸಲಾಯಿತು.



ವಾಸುದೇವ ದೇವಸ್ಥಾನದ ಅಂಗನವಾಡಿ, ಉಪ್ಪಿನಕುದ್ರು



ಆಲ್ಕುದ್ರು ಅಂಗನವಾಡಿ, ಉಪ್ಪಿನಕುದ್ರು



ವರಾಹ ಗಣಪತಿ ದೇವಸ್ಥಾನದ ಅಂಗನವಾಡಿ, ಉಪ್ಪಿನಕುದ್ರು

ಉಪ್ಪಿನಕುದ್ರು ಗ್ರಾಮದ ವಾಸುದೇವ ದೇವಸ್ಥಾನದ ಅಂಗನವಾಡಿ, ವರಾಹ ಗಣಪತಿ ದೇವಸ್ಥಾನದ ಅಂಗನವಾಡಿ ಹಾಗೂ ಆಲ್ಕುದ್ರು ಅಂಗನವಾಡಿಯ ಮಕ್ಕಳಿಗೆ ಪ್ರೋಟೀನ್ ಪೌಡರನ್ನು ನಮ್ಮ ಕ್ಲಬ್ಬಿನ ವತಿಯಿಂದ 26–08–2024ರಂದು ವಿತರಿಸಲಾಯಿತು. ತಲ್ಲೂರು ಗ್ರಾಮ ಪಂಚಾಯತ್ ಅಧ್ಯಕ್ಷರಾದ ಗಿರೀಶ್ ಎಸ್. ನಾಯಕ್‌ರವರು ಉಪಸ್ಥಿತರಿದ್ದರು. ಸುಮಾರು 85 ಪುಟಾಣಿಗಳಿಗೆ ಪ್ರೋಟೀನ್ ಪೌಡರನ್ನು ಕ್ಲಬ್ಬಿನ ವತಿಯಿಂದ ವಿತರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪಂಚಾಯಿತಿ ಅಧ್ಯಕ್ಷರು ರೋಟರಿಯ ಸಮಾಜಮುಖಿ ಕಾರ್ಯವನ್ನು ಶ್ಲಾಘಿಸಿ ಶುಭ ಕೋರಿದರು.







ರೋಟರಿ ಕ್ಲಬ್ ಕುಂದಾಪುರ ದಕ್ಷಿಣ ಇನ್ನರ್‌ವೀಲ್ ಕ್ಲಬ್ ಹಾಗೂ ಮಧ್ವರಾಜ್ ಎನಿಮಲ್ ಕೇರ್ ಟ್ರಸ್ಟ್ ಮಲ್ಪೆ ಇದರ ಜಂಟಿ ಆಶ್ರಯದಲ್ಲಿ ಸೆಪ್ಟೆಂಬರ್ 2 ರಿಂದ 5 ರವರೆಗೆ ಸರಕಾರಿ ಪಶು ಆಸ್ಪತ್ರೆ ಕುಂದಾಪುರದಲ್ಲಿ ನಾಯಿ(ದೇಸಿ)ಗಳ ಸಂತಾನಹರಣ ಉಚಿತ ಶಸ್ತ್ರಚಿಕಿತ್ಸೆ ಕಾರ್ಯಕ್ರಮ ನೆರವೇರಿತು. ಸಾರ್ವಜನಿಕರಿಂದ ಇದಕ್ಕೆ ಉತ್ತಮ ಸ್ಪಂದನೆ ದೊರಕಿದ್ದು, 90 ನಾಯಿಗಳಿಗೆ ಶಸ್ತ್ರಚಿಕಿತ್ಸೆ ನಡೆಸಲಾಯಿತು.

**ಕುಟುಂಬ** – ಯಾರಾದರೂ ಬಲು ಬೇಗ ಸತ್ತು ಹೋದರೆ "ದೇವರು ಅವರನ್ನು ತುಂಬಾ ಪ್ರೀತಿಸುತ್ತಿದ್ದರು. ಅದಕ್ಕಾಗಿ ಅವರನ್ನು ತನ್ನ ಬಳಿ ಬೇಗ ಕರೆಸಿಕೊಂಡರು" ಎಂಬುದಾಗಿ ಜನರು ಆಡಿಕೊಳ್ಳುತ್ತಾರೆ. ಆದರೆ ನಾವು ಈ ಭೂಮಿಯ ಮೇಲೆ ಇನ್ನೂ ಬದುಕಿದ್ದೇವೆ ಎಂದರೆ ಈ ಭೂಮಿಯ ಮೇಲಿರುವ ಯಾರೋ ನಮ್ಮನ್ನು ದೇವರಿಗಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದಾರೆ ಎಂದು ಅರ್ಥೈಸಬಹುದು. ಅದುವೇ ನಮ್ಮ **ಕುಟುಂಬ** **– ಮದರ್ ತೆರೇಸಾ**

